**ದಿನಾಂಕ:19-04-2024 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಮುಂದುವರೆದ ಪಾಟೀ ಸವಾಲುಃ 11 ರಿಂದ 13, 15 ರಿಂದ 17 ನೇ ಪ್ರತಿವಾದಿಯರ ಪರ ಶ್ರೀ.ಎಸ್ ಡಿ ಎಂ ವಕೀಲರಿಂದ :**

ಸಿಲಿಂಗ್ ಲಿಮಿಟ್ ಎಂದರೆ ಏನು ಎಂಬುದು ನನಗೆ ಗೊತ್ತಿರುವುದಿಲ್ಲ, ಈ ವಿಚಾರವನ್ನು ನನ್ನ ಸಾಕ್ಷ್ಯಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ದಾವಾ ಶೆಡ್ಯೂಲ ಸಿ 4 ರ ಆಸ್ತಿಯು 2000 ನೇ ಇಸವಿಯ ವಾಟ್ನಿ ಪ್ರಕಾರ ನನ್ನ ಹಿಸ್ಸೆಗೆ ಬಂತು ಎಂದರೆ ಸರಿಯಲ್ಲ. ಈ ಆಸ್ತಿಯನ್ನು 2005 ನೇ ಇಸ್ವಿಯಂದು ನಾನು ಮತ್ತು ಐಯ್ಯನಗೌಡ ಪರಸ್ಪರ ಅದಲುಬದಲು ಮಾಡಿಕೊಂಡು ಆತನಿಗೆ

ಬಿಟ್ಟುಕೊಟ್ಟೆನು ಎಂದರೆ ಸರಿಯಲ್ಲ. ಈ ಬಗ್ಗೆ ಎಂ.ಆರ್ ನಂಬರ 43/2005-06 ದಾಖಲಾಗಿರುವ ವಿಚಾರ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ ಸಿ 5 ರ ಆಸ್ತಿಯನ್ನು ನನ್ನ ಅಣ್ಣ ಚನ್ನಬಸನಗೌಡನ ಹೆಸರಿನಲ್ಲಿ ಖರೀದಿಗೆ ಹಿಡಿದಿದ್ದು, ಆದರೆ ದಿನಾಂಕ ನನಗೆ ಗೊತ್ತಿರುವುದಿಲ್ಲ. ಈ ಆಸ್ತಿಯನ್ನು 2000 ನೇ ಇಸ್ವಿಯಂದು ನಮ್ಮ ಕುಟುಂಬದ ಆಸ್ತಿಯಲ್ಲಿ ಹಿಸ್ಸೆಯಾದ ನಂತರ 2005 ನೇ ಇಸ್ವಿಯಲ್ಲಿ ನನ್ನ ಅಣ್ಣ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಆ ಕಾರಣ ಈ ಆಸ್ತಿಯು ನನ್ನ ಅಣ್ಣ ಚನ್ನಬಸನಗೌಡನ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನನ್ನ ಅಣ್ಣ ಮೃತಪಟ್ಟ ನಂತರ ಆತನ ಮಕ್ಕಳುಗಳು ಹಾನಗಲ್ಲ ಸಿವೀಲ ನ್ಯಾಯಾದಿಶರ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 118/2015 ರಂತೆ ಪ್ರಕರಣ ದಾಖಲಿಸಿಕೊಂಡು ರಾಜೀ ಮಾಡಿಕೊಂಡು ತಮ್ಮ ಹೆಸರಿಗೆ ಪಾಲು ವಿಬಿಬಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದ ಹಾಗೆ ಮಾಡಿಸಿಕೊಂಡಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ಈ ಆಸ್ತಿಯು ಆ ರಾಜೀ ಡಿಕ್ರಿ ಪ್ರಕಾರ 16 ನೇ ಪ್ರತಿವಾದಿಯ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಈ ರೀತಿ ಖಾತಾ ಬದಲಾವಣೆ ಮಾಡಲಾದ ಸಂದರ್ಬದಲ್ಲಿ ಯಾವುದೇ ತಕರಾರು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನಾವು ಒಟ್ಟಿಗೆ ವಾಸವಾಗಿದ್ದ ಕಾರಣ ನಾನು ಯಾವುದೇ ತಕರಾರನ್ನು ಮಾಡಿರುವುದಿಲ್ಲ ಎಂದು ಸ್ವತಃ ನುಡಿಯುತ್ತಾರೆ.

ದಾವಾ ಶೆಡ್ಯೂಲ 7 ರ ಆಸ್ತಿ ಚನ್ನಬಸನಗೌಡ ಮತ್ತು ನಾಗನಗೌಡನ ಹೆಸರಿನಲ್ಲಿ ತಲಾ 1 ಎಕರೆಯಂತೆ ಖರೀದಿ ಮಾಡಲಾಗಿರುತ್ತದೆ. ಈ ಆಸ್ತಿಯು 2000 ನೇ ಇಸ್ವಿಯಂದು ಆದ ವಾಟ್ನಿಯಂತೆ ಚನ್ನಬಸನಗೌಡನ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಅವರು ಮರಣ ಹೊಂದಿದ ನಂತರ ಅವರ ಮಕ್ಕಳುಗಳು ಅಸಲು ದಾವಾ ಸಂಖ್ಯೆ 118/2015 ರ ರಾಜೀ ಡಿಕ್ರಿಯಂತೆ ಆ ಆಸ್ತಿಯು 16 ನೇ ಪ್ರತಿವಾದಿಯ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನಾನು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ ಸಿ 8 ರ ಆಸ್ತಿ ನಾಗನಗೌಡನ ಹೆಸರಿನಲ್ಲಿ ಖರೀದಿಸಿದ್ದರೂ ಸಹ 2000 ನೇ ಇಸ್ವಿಯ ವಾಟ್ನಿ ಪ್ರಕಾರ ನಾಗನಗೌಡನ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಆ ಆಸ್ತಿ ನಾಗನಗೌಡನ ಹೆಸರಿನಲ್ಲಿ ಇದ್ದ ಕಾರಣ 2000 ನೇ ಇಸ್ವಿಯ ವಾಟ್ನಿ ಪ್ರಕಾರ ಆದ ಡ ನಂಬರ 1053 ರಲ್ಲಿ ಈ ಬಗ್ಗೆ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಈಗ ಈ ಆಸ್ತಿ ಯಾರ ಹೆಸರಿನಲ್ಲಿ ಇದೆ ಎಂಬ ಬಗ್ಗೆ ಉತಾರೆಯನ್ನು ನಾನು ನೋಡಿರುವುದಿಲ್ಲ. ನಾಗನಗೌಡರವರು ಮೃತಪಟ್ಟ ನಂತರ ಅವರ ಹೆಂಡತಿ

ಮಕ್ಕಳುಗಳು ಹಾನಗಲ್ಲನ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 154/2016 ರಂತೆ ಪ್ರಕರಣ ದಾಖಲಿಸಿ ರಾಜೀ ಮಾಡಿಕೊಂಡ ಪ್ರಕಾರ 2 ನೇ ಪ್ರತಿವಾದಿಯ ಹೆಸರಿಗೆ ದಾಖಲೆಗಳು ಆಗಿರುತ್ತದೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದ ರೀತಿಯಲ್ಲಿ ದಾಖಲೆ ಮಾಡಿಸಿಕೊಂಡಿರುತ್ತಾರೆ ಎಂದು ಸ್ವತಃ ನುಡಿಯುತ್ತಾರೆ.

ದಾವಾ ಅನುಸೂಚಿ ಸಿ 9 ರ ಆಸ್ತಿ ನಮ್ಮ ಅಣ್ಣ ಚನ್ನಬಸನಗೌಡನ ಹೆಸರಿಗೆ ಖರೀದಿಗೆ ಹಿಡಿದ ಆಸ್ತಿಯಾಗಿರುತ್ತದೆ. ಅದನ್ನು ಯಾವ ವರ್ಷ, ಎಷ್ಟು ಮೊತ್ತಕ್ಕೆ ಖರೀದಿಸಲಾಯಿತು ಎಂಬುದು ನನಗೆ ಗೊತ್ತಿಲ್ಲ. ಈ ಆಸ್ತಿಯನ್ನು 2000 ನೇ ಇಸವಿಯಂದು ವಾಟ್ನಿಯಾದ ನಂತರ ಚನ್ನಬಸನಗೌಡರವರು 2003 ನೇ ಸಾಲಿನಲ್ಲಿ ಖರೀದಿಸಿದ ಕಾರಣ ಈ ಆಸ್ತಿಯು ಆತನ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ವಾಟ್ನಿಯಾದ ನಂತರ ಖರೀದಿಸಿರುವುದರಿಂದ ಈ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಆ ಪ್ರಕಾರವಾಗಿ ಈ ಆಸ್ತಿಯು ಪ್ರತಿವಾದಿ 17 ರವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸಿ 10 ರ ಆಸ್ತಿ ನನ್ನ ಅಣ್ಣ ಬಸನಗೌಡನ ರುದ್ರಗೌಡ ಪಾಟೀಲ ಮತ್ತು ಶೇಕವ್ವ ಬಸವನಗೌಡ ರ ಹೆಸರಿನಲ್ಲಿ ಖರೀದಿಸಲಾಗಿರುತ್ತದೆ. ಈ ಆಸ್ತಿಯನ್ನು 2000 ನೇ ಇಸ್ವಿಯಂದು ಆದ ವಾಟ್ನಿ ಪ್ರಕಾರ ಬಸನಗೌಡನ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಆ ಆಸ್ತಿಯು ಬಸನಗೌಡನ ಹೆಸರಿನಲ್ಲಿ ಖರೀದಿಸಿದ ಕಾರಣ ವಾಟ್ನಿ ಡ ನಂಬರ 1053 ರಲ್ಲಿ ಅದನ್ನು ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಉಳಿದ 39 ಗುಂಟೆ ಆಸ್ತಿಯನ್ನು ನಮ್ಮ ಕುಟುಂಬದಲ್ಲಿ ಆದ ವಾಟ್ನಿಯ ನಂತರ 2002 ನೇ ಸಾಲಿನಲ್ಲಿ ಶೇಕವ್ವನ ತಮ್ಮ ನೀಡಿದ ಹಣದಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಅನುಸೂಚಿ ಸಿ 13 ರ ಆಸ್ತಿ 1997 ರಲ್ಲಿ ಚನ್ನಬಸನಗೌಡನ ಹೆಸರಿಗೆ ಖರೀದಿಗೆ ಹಿಡಿದ ಆಸ್ತಿ ಎಂದರೆ ಸರಿ. 2000 ನೇ ಇಸ್ವಿಯಂದು ಆದ ವಾಟ್ನಿ ಪ್ರಕಾರ ಈ ಆಸ್ತಿಯು ನನ್ನ ಅಣ್ಣ ನಾಗನಗೌಡನ ಹೆಸರಿಗೆ ಬಂದಿದ್ದು, ಈ ಬಗ್ಗೆ ಡ ನಂಬರ 1053 ರಲ್ಲಿ ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಆ ನಂತರ ನಾಗನಗೌಡನ ಮೃತಪಟ್ಟಿದ್ದು, ಆ ತನ ಮಕ್ಕಳುಗಳು ಹಾನಗಲ್ಲನ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್ ನಂಬರ 118/2016 ರಂತೆ ಪ್ರಕರಣ ದಾಖಲಿಸಿ ರಾಜೀ ಮಾಡಿಕೊಂಡಿದ್ದು, ಆ ಪ್ರಕಾರವಾಗಿ ಈ ಆಸ್ತಿಯು 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಈ ರೀತಿ ಖಾತಾ ಬದಲಾವಣೆ ಯಾಗಿದ್ದನ್ನು ನಾನು ಈವರೆಗೂ ಸಹ ಯಾವುದೇ ಪ್ರಾದಿಕಾರದ ಮುಂದೆ ಪ್ರಶ್ನಿಸಿರುವುದಿಲ್ಲ ಸಾಕ್ಷಿಯು ನನಗೆ ಗೊತ್ತಿಲ್ಲದೆ ಇರುವುದರಿಂದ

ಪ್ರಶ್ನಿಸಿರುವುದಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಪುಟ 4 ಮತ್ತು 8 ರಲ್ಲಿ ಹೇಳಲಾದ ಅಂಶಗಳು ಸಂಪೂರ್ಣವಾಗಿ ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಅದೇ ರೀತಿ ಚನ್ನಬಸನಗೌಡರವರು ಪ್ರತಿವಾದಿ 24 ಮತ್ತು 25 ರವರಿಗೆ ಮಾರಾಟ ಮಾಡಿರುತ್ತಾರೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಶೆಡ್ಯೂಲ ಇ 5 ಮತ್ತು 6 ರ ಆಸ್ತಿಗಳನ್ನು ಮಾರಾಟ ಮಾಡಿದ ಸಂದರ್ಬದಲ್ಲಿಯೇ ಈ ವಿಚಾರ ಗೊತ್ತಿದ್ದರೂ ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ಮಾರಾಟ ಮಾಡಿರುವ ವಿಚಾರ ಗೊತ್ತಿದ್ದರೂ ಸಹ ಈ ಆಸ್ತಿಗಳು ಚನ್ನಬಸನಗೌಡನ ಸ್ವಯಾರ್ಜಿತ ಆಸ್ತಿಗಳಾದ ಕಾರಣ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯಪ್ರಮಾಣ ಪತ್ರದ ಪುಟ 7, 8 ಮತ್ತು 9 ರಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ ಡಿ 1 ರ ಆಸ್ತಿ ನಮ್ಮ ಒಟ್ಟು ಕುಟುಂಬದ ಆಸ್ತಿಯಾಗಿದ್ದು, ದಾವಾ ಡಿ 2 ರ ಆಸ್ತಿ ಚನ್ನಬಸನಗೌಡರ ಸ್ವಯಾರ್ಜಿತ ಆಸ್ತಿಯಾಗಿದ್ದರೂ ಸಹ ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಆಸ್ತಿಗಳಲ್ಲಿ 1984 ಮತ್ತು 2000 ನೇ ಇಸ್ವಿಯಂದು ಈಗಾಗಲೇ ವಾಟ್ನಿಯಾಗಿದ್ದರೂ ಸಹ ನಮ್ಮ ಕುಟುಂಬದಲ್ಲಿ ಯಾವುದೇ ವಾಟ್ನಿಯಾಗಿಲ್ಲ ಒಟ್ಟು ಕುಟುಂಬಂದಲ್ಲಿಯೇ ವಾಸವಾಗಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಶೆಡ್ಯೂಲ ಡಿ 1 ರ ಆಸ್ತಿಯಲ್ಲಿ ಕಣ ಮಾಡಿಕೊಂಡು ಸ್ವಾಧೀನ ಹೊಂದಿರುತ್ತೇನೆ ಎಂದರೆ ಸರಿ. ಈ ಆಸ್ತಿಯಲ್ಲಿಯೇ ನಮ್ಮ ಕುಟುಂಬದಲ್ಲಿ ಬೆಳೆದ ಆಹಾರ ಪದಾರ್ಥಗಳನ್ನು ಶೇಖರಣೆ ಮಾಡುತ್ತಿದ್ದರೂ ಸಹ ದಾವಾ ಶೆಡ್ಯೂಲ ಡಿ 2 ರ ಆಸ್ತಿ ಗೋಡೌನ ಮಾಡಿಕೊಂಡು ಆಹಾರ ಪದಾರ್ಥಗಳನ್ನು ಶೇಖರಣೆ ಮಾಡಿಕೊಳ್ಳುತ್ತಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಂಬಂಧವಾಗಿ ಗೋಡೌನ ಕಟ್ಟಿಕೊಂಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ ಡಿ 2 ರ ಆಸ್ತಿಯನ್ನು ನಾವುಗಳು ಗೋಡೌನ ನಿರ್ಮಿಸಿಕೊಂಡು ಉಪಯೋಗಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಹಾನಗಲ್ಲ ಪಟ್ಟನದಲ್ಲಿರುವ ದಾವಾ ಶೆಡ್ಯೂಲ ಇ 8 ಮತ್ತು 9 ರ ಆಸ್ತಿಗಳು ಹಾನಗಲ್ಲಿನ ಮುಖ್ಯ ರಸ್ತೆಯ ಒಳ ಭಾಗದಲ್ಲಿವೆ ಎಂದರೆ ಸರಿ. ಈ ಆಸ್ತಿಯನ್ನು ಚನ್ನಬಸನಗೌಡರವರು ತನ್ನ ಭತ್ತದ ವ್ಯವಹಾರ ಮಾಡುವ ಸಂಬಂಧ ತನ್ನ ಭತ್ತದ ವ್ಯಾಪಾರದಿಂದ ಬಂದ ಹಣದಿಂದ ಖರೀದಿಸಿದ್ದರು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ತನ್ನ

ಮೊಮ್ಮಕ್ಕಳ ಶಾಲಾ ವಿದ್ಯಾಭ್ಯಾಸಕ್ಕಾಗಿ ಈ ಆಸ್ತಿಯನ್ನು ಖರೀದಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಶೆಡ್ಯೂಲ ಇ 10 ರ ಆಸ್ತಿ ನಾವು ಕೂಡು ಕುಟುಂಬದಲ್ಲಿ ಇದ್ದಾಗಲೇ ಖರೀದಿಸಿದ ಆಸ್ತಿಯಾಗಿರುತ್ತದೆ. ಈ ಆಸ್ತಿಯನ್ನು ಇರಲಿ ಎಂಬ ಕಾರಣಕ್ಕಾಗಿ ಬೈಚವಳ್ಳಿ ಗ್ರಾಮದಲ್ಲಿ ಖರೀದಿಸಲಾಗಿತ್ತು. 12 ನೇ ಪ್ರತಿವಾದಿ ತನ್ನ ತಂದೆಯ ಕಾಲದಿಂದಲೂ ಸಹ ಆತನ ಜೊತೆ ಹಾನಗಲ್ಲನ ಅಕ್ಕಪಕ್ಕದ ಹಳ್ಳಿಗಳಲ್ಲಿ ಭತ್ತ ಖರೀದಿ ವ್ಯಾಪಾರ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ಈ ಆಸ್ತಿಯನ್ನು ಬೈಚವಳ್ಳಿ ಗ್ರಾಮದ ಅಕ್ಕಪಕ್ಕದ ಗ್ರಾಮಗಳ ರೈತರಿಂದ ಭತ್ತ ಖರೀದಿಸಿದ ಕಾರಣ ಅದರ ಶೇಖರಣೆಗಾಗಿ 2012 ನೇ ಇಸ್ವಿಯಂದು ಈ ಆಸ್ತಿಯನ್ನು ಖರೀದಿಸಿ ಆ ನಂತರ ತಗಡಿನ ಶೆಡ್ ಹಾಕಿ ಗೋಡೌನ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ಆಸ್ತಿಯು 12 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದರೂ ಸಹ ಬೇಕಾಯ್ದೇಶೀರ ಹಿಸ್ಸೆ ಪಡೆಯಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ ಡಿ 2 ರ ಆಸ್ತಿಯಲ್ಲಿ ಸ್ವಲ್ಪ ಭಾಗದ ಆಸ್ತಿ ರಸ್ತೆ ಅಗಲೀಕರಣಕ್ಕಾಗಿ ಹೋಗಿದ್ದು, ಅದರಿಂದ ದಾವಾ ಶೆಡ್ಯೂಲ ಎಫ್ ನಲ್ಲಿ ನಮೂದಿಸಿದ ಮೊತ್ತ ಚನ್ನಬಸನಗೌಡನ ಹೆಸರಿನಲ್ಲಿಯೇ ಬಂದಿದ್ದು, ಅದು ಆತನ ಸ್ವಯಾರ್ಜಿತವಾದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ.

1 ನೇ ವಾದಿ ಹಾನಗಲ್ಲನ ಹಿರಿಯ ಸಿವಿಲ ನ್ಯಾಯಾಲಯದಲ್ಲಿ ಚನ್ನಬಸನಗೌಡನ ವಾರಸುದಾರರು ಮತ್ತು ನಾಗನಗೌಡನ ವಾರಸುದಾರರ ವಿರುದ್ಧ ಒಂದು ಖಾಸಗಿ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಖಾಸಗಿ ದೂರಿನಲ್ಲಿ ನಾನು ಸಹ 1 ನೇ ವಾದಿ ಪರ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಈಗಾಗಲೇ ವಾಟ್ಣಿಯಾಗಿದ್ದು, ತಮ್ಮ ತಮ್ಮ ಹೆಸರಿಗೆ ದಾಖಲೆಗಳು ಆಗಿರುವ ವಿಚಾರ ಗೊತ್ತಿದ್ದರೂ ಚನ್ನಬಸನಗೌಡ ಮತ್ತು ನಾಗನಗೌಡರ ಹಾಗೂ ಅವರ ವಾರಸುದಾರರು ಸಂಪಾದಿಸಿದ ಆಸ್ತಿಗಳಲ್ಲಿ ಹಿಸ್ಸೆ ಪಡೆಯಬೇಕೆಂಬ ಉದ್ದೇಶದಿಂದ ಹಿಸ್ಸೆ ಆಗಿಲ್ಲ ಎಂದು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 21 ನೇ ಪ್ರತಿವಾದಿ ಪರ ಶ್ರೀ.ಬಿ.ಎನ್.ಎಂ ವಕೀಲರಿಂದಃ</u>**

ಪ್ರತಿವಾದಿ 21ರವರು ಮೂಲ ಪುರುಷ ರುದ್ರಗೌಡನ ಮಗಳಾಗಿರುತ್ತಾರೆ. ದಾವಾ ಆಸ್ತಿಗಳು ಏಕತ್ರ ಪಿತ್ರಾರ್ಜಿತವಾದ ಆಸ್ತಿಗಳು ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಈವರೆಗೂ ಸಹ

ವಾದಿ ಮತ್ತು ಪ್ರತಿವಾದಿಯರ ನಡುವೆ ಹಿಸ್ಸೆ ಆಗಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನನಗೆ ಇರುವಷ್ಟೆ ಹಿಸ್ಸಾ ಆಸ್ತಿ 21 ನೇ ಪ್ರತಿವಾದಿಗೂ ಇದೆ ಎಂದರೆ ಸರಿ.

**(ಪ್ರತಿವಾದಿ 21 ರವರ ಪರ ಮಾಡಲಾದ ಪಾಟೀ ಸವಾಲನ್ನೆ ಪ್ರತಿವಾದಿ 23 ರವರಿಗೂ ಅಳವಡಿಸಿಕೊಳ್ಳಲು ಕೋರಿರುತ್ತಾರೆ.)**

**ಪಾಟೀ ಸವಾಲುಃ 6, 8 ರಿಂದ 10, 18, 19 ಮತ್ತು 22 ನೇ ಪ್ರತಿವಾದಿ ಪರ ಶ್ರೀ.ಜಿ.ಎಸ್.ಕೆ ವಕೀಲರಿಂದಃ**

ಪ್ರತಿವಾದಿ 22 ರವರು ದಾವಾ ಶೆಡ್ಯೂಲ ಸಿ 11 ರ ಆಸ್ತಿಯ ಪೈಕಿ 2 ಎಕರೆ ಜಮೀನನ್ನು ಮಕ್ಬೂಲ್ ಅಹ್ಮದ್ ಖಾದರ್ ಸಾಬ್ ಹೋತನಹಳ್ಳಿರವರ ಕಡೆಯಿಂದ ಖರೀದಿಸಿದ್ದರು ಎಂದರೆ ಸರಿ. ಸಾಕ್ಷಿಯು ಕುಡು ಕುಟುಂಬದಲ್ಲಿದ್ದ ಸಂದರ್ಬದಲ್ಲಿಯೇ ಖರೀದಿಸಿದ್ದರು ಎಂದು ಸ್ವತಃ ನುಡಿಯುತ್ತಾರೆ. ಒಟ್ಟು ಕುಟುಂಬದಲ್ಲಿಯೇ ಖರೀದಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಆಸ್ತಿಯನ್ನು 22 ನೇ ಪ್ರತಿವಾದಿ ತನ್ನ ಸ್ವ ಸಂಪಾದನೆಯಿಂದ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. **(ಉಳಿದ ಪಾಟೀ ಸವಾಲಿನಲ್ಲಿ ಅಂಶಗಳನ್ನು ಪ್ರತಿವಾದಿ 11 ರಿಂದ 13, 15 ರಿಂದ 17 ರವರ ಪರ ವಕೀಲರು ಮಾಡಲಾದ ಪಾಟೀ ಸವಾಲನ್ನೆ ಅಳವಡಿಸಿಕೊಳ್ಳಲು ಕೋರಿರುತ್ತಾರೆ.)**

**ಪಾಟೀ ಸವಾಲುಃ 1 ರಿಂದ 5 ನೇ ಪ್ರತಿವಾದಿ ಪರ ಶ್ರೀ.ಜಿ.ಹೆಚ್.ಬಿ ವಕೀಲರಿಂದಃ**

ದಾವಾ ಅನುಸೂಚಿ ಸಿ 1 ರ ಆಸ್ತಿ 1 ನೇ ಪ್ರತಿವಾದಿ ಖರೀದಿಸಿದ ಅಸ್ತಿ ಎಂದರೆ ಸರಿ. ಸಾಕ್ಷಿಯು ಒಟ್ಟು ಕುಟುಂಬದಲ್ಲಿದ್ದ ಸಂದರ್ಬದಲ್ಲಿಯೇ ಖರೀದೀಸಿದ ಆಸ್ತಿ ಎಂದು ಸ್ವತಃ ನುಡಿಯುತ್ತಾರೆ. ಈ ಆಸ್ತಿಯ ದಾಖಲೆಗಳು ಈಗಲೂ ಸಹ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿಯು ಈವರೆಗೂ ಸಹ ವಾಟ್ನಿಯಾಗಿಲ್ಲ ಎಂದು ಸ್ವತಃ ನುಡಿಯುತ್ತಾರೆ. ನಮ್ಮ ಕುಟುಂಬದಲ್ಲಿ ಈವರೆಗೂ ಸಹ ವಾಟ್ನಿಯಾಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ ಸಿ 6 ರ ಆಸ್ತಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿಸಿದ ಆಸ್ತಿ ಎಂದರೆ ಸರಿ. ಸಾಕ್ಷಿಯು ಒಟ್ಟು ಕುಟುಂಬದಲ್ಲಿ ಇದ್ದಾಗಲೇ ಖರೀದಿಸಿದ ಆಸ್ತಿಯಾಗಿರುತ್ತದೆ ಎಂದು ಸ್ವತಃ ನುಡಿಯುತ್ತಾರೆ. ಆ ಖರೀದಿಗೆ ಹಿಡಿದ ದಿನದಿಂದಲೂ ಸಹ ದಾಖಲೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿವೆ ಎಂದರೆ ಸರಿ. ದಾವಾ ಶೆಡ್ಯೂಲ ಸಿ 2 ರ ಆಸ್ತಿ 2 ನೇ ಪ್ರತಿವಾದಿ ಖರೀದಿಸಿದ ಆಸ್ತಿ ಎಂದರೆ

ಸರಿ. ಸಾಕ್ಷಿಯು ಒಟ್ಟು ಕುಟುಂಬಂದಲ್ಲಿಯೇ ಇದ್ದಾಗಲೇ ಖರೀದಿಸಿದ ಆಸ್ತಿ ಎಂದು ಸ್ವತಃ ನುಡಿಯುತ್ತಾರೆ. ಈ ಮೂರು ಆಸ್ತಿಗಳು ಸಹ 1 ಮತ್ತು 3 ನೇ ಪ್ರತಿವಾದಿಯರು ತಮ್ಮ ಸ್ವ-ಗಳಿಸಿದ ಹಣದಿಂದ ಖರೀದಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಉಳಿದ ಪಾಟೀ ಸವಾಲಿನಲ್ಲಿ ಅಂಶಗಳನ್ನು ಪ್ರತಿವಾದಿ 11 ರಿಂದ 13, 15 ರಿಂದ 17 ರವರ ಪರ ವಕೀಲರು ಮಾಡಲಾದ ಪಾಟೀ ಸವಾಲನ್ನೆ ಅಳವಡಿಸಿಕೊಳ್ಳಲು ಕೋರಿರುತ್ತಾರೆ.)**

**(ಪ್ರತಿವಾದಿ 11 ರಿಂದ 13, 15 ರಿಂದ 17 ರವರ ಪರ ವಕೀಲರು ಮಾಡಲಾದ ಪಾಟೀ ಸವಾಲನ್ನೆ ಪ್ರತಿವಾದಿ 24 ಮತ್ತು 25 ರವರ ಪರ ಅಳವಡಿಸಿಕೊಳ್ಳಲು ಕೋರಿರುತ್ತಾರೆ.)**

**: ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ